ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಸಂಪಿಗೆ ರಸ್ತೆ, 18ನೇ ಕ್ರಾಸ್,ಮಲ್ಲೇಶ್ವರಂ,
ಬೆಂಗಳೂರು-12

ಸಂಖ್ಯೆ:ಪಪೂಶಿ/ತ್ರೈಶಾ/ಸೇ.ದಳ/2016-17 ದಿನಾಂಕ: 14/10/2016

ಜ್ಞಾಪನ

ವಿಷಯ: ಭಾರತ ಸೇವಾದಳ ಶುಲ್ಕವನ್ನು ಆಯಾ ಕಾಲೇಜುಗಳ ಪ್ರಾಂಶುಪಾಲರ ನಿಧಿಗೆ ಜಮಾ ಮಾಡುವ ಬಗ್ಗೆ ಹಾಗೂ ಚಟುವಟಿಕೆ ನಡೆಸಲು ಅನುಮತಿ ನೀಡುವ ಕುರಿತು

ಉಲ್ಲೇಖ:1) ಸರ್ಕಾರದ ಪತ್ರ ಸಂಖ್ಯೆ: ಇಡಿ 17 ಯೋಸಕ 2016 ದಿನಾಂಕ 09/06/2016.
2) ಈ ಕಛೇರಿ ಪತ್ರ ಸಮ ಸಂಖ್ಯೆ:ಪಪೂಶಿ/ತ್ರೈಶಾ/ಸೇ.ದಳ/2016-17 ದಿನಾಂಕ 30/06/2016.
3)ಪ್ರಧಾನ ಕಾರ್ಯದರ್ಶಿಗಳು, ಭಾರತ ಸೇವಾದಳ ಇವರ ಪತ್ರ ಸಂಖ್ಯೆ:ಭಾಸೇದ/ಕೇಕ/106/2016-17 ದಿನಾಂಕ 31/08/2016.
4) ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ:ಪಪೂಶಿ/ತ್ರೈಶಾ/ಸೇ.ದಳ/2016-17 ದಿನಾಂಕ 30/06/2016.
5) ಭಾರತ ಸೇವಾದಳ ಕಛೇರಿ ಪತ್ರ ಸಂಖ್ಯೆ:ಭಾಸೇದ/ಕೇಕ/106/2016-17 ದಿನಾಂಕ 31/08/2016

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-03ರಲ್ಲಿ ತಿಳಿಸಿದಂತೆ ಭಾರತ ಸೇವಾದಳ ಶುಲ್ಕವಾಗಿ ಪ್ರತೀ ವಿದ್ಯಾರ್ಥಿಯಿಂದ ರೂ. 10-00ಗಳನ್ನು ವಸೂಲು ಮಾಡಿದ ಒಟ್ಟು ಮೊತ್ತದಲ್ಲಿ ಪ್ರತಿ ಶಾಖೆಯಿಂದ ರೂ.100-00ಗಳನ್ನು ಮಾತ್ರ ಶಾಖಾ ನೊಂದಣಿ ಶುಲ್ಕವಾಗಿ ಪ್ರಧಾನ ಕಾರ್ಯದರ್ಶಿ, ಭಾರತ ಸೇವಾದಳ. ಕುಮಾರ ಕೃಪ ರಸ್ತೆ, ಬೆಂಗಳೂರು-560001 ಇವರಿಗೆ ಸಂದಾಯ ಮಾಡುವುದು. ಉಳಿದ ಒಟ್ಟು ಮೊತ್ತವನ್ನು ಪ್ರಾಂಶುಪಾಲರ ಖಾತೆಗೆ ಜಮಾ ಮಾಡಿ ಸೇವಾದಳ ಚಟುವಟಿಕೆಗಳಿಗೆ ಬಳಸಿಕೊಳ್ಳಲು ದಿನಾಂಕ 30/06/2016ರ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು.

ಆದಾಗ್ಯೂ ಸಹ ಉಲ್ಲೇಖ-05ರಲ್ಲಿನ ಪತ್ರದಲ್ಲಿ ಭಾರತ ಸೇವಾದಳ ಪ್ರಧಾನ ಕಾರ್ಯದರ್ಶಿಗಳು ಪತ್ರದಲ್ಲಿ ತಿಳಿಸಿದಂತೆ ಉಳಿದ ಒಟ್ಟು ಮೊತ್ತವನ್ನು ಪ್ರಾಂಶುಪಾಲರ ಖಾತೆಗೆ ಜಮಾ ಮಾಡುವ ಬದಲಾಗಿ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡುತ್ತಿರುವುದು ಕಂಡುಬಂದಿದ್ದು, ಕೂಡಲೇ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು ತಪ್ಪನ್ನು ಸರಿಪಡಿಸಿಕೊಂಡು ನೊಂದಣಿ ಶುಲ್ಕವಾಗಿ 100-00 ರೂಗಳನ್ನು ಮಾತ್ರ ಪ್ರತೀ ಕಾಲೇಜಿನಿಂದ ಪ್ರಧಾನ ಕಾರ್ಯದರ್ಶಿಗಳು, ಭಾರತ ಸೇವಾದಳ, ಕುಮಾರ ಕೃಪ ರಸ್ತೆ, ಬೆಂಗಳೂರು-560001 ಇವರಿಗೆ ಶಾಖಾ ನೊಂದಣಿ ಶುಲ್ಕವಾಗಿ ಚಲನ್ ಮೂಲಕ ಸಂದಾಯ ಮಾಡಿ ಉಳಿದ ಮೊತ್ತವನ್ನು ಪ್ರಾಂಶುಪಾಲರ ಖಾತೆಗೆ ಜಮಾ ಮಾಡಿಕೊಂಡು ಕಾಲೇಜಿನ ಸೇವಾದಳ ಚಟುವಟಿಕೆಗಳಿಗೆ ಮಾತ್ರ ವಿನಿಯೋಗಿಸಲು ತಿಳಿಸಿದೆ. ಮೇಲ್ಕಂಡ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು(ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ.